ಆಯುಕ್ತರು
ಕಾರ್ಮಿಕ ಇಲಾಖೆ

ಕರ್ನಾಟಕ ಸರ್ಕಾರ

"ಕಾರ್ಮಿಕ ಭವನ", ಐಟಿಐ ಕಾಲೇಜು ಕಾಂಪೌಂಡ್,
ಬನ್ನೇರುಘಟ್ಟ ರಸ್ತೆ, ಬೆಂಗಳೂರು -560029.
ದೂರವಾಣಿ: 29753078
ಇಮೇಲ್- labour.commissioner42@gmail.com

ಸಂ. ಜಿಜಿಡ್‌ಟಿ/ಸಿಆರ್-30/2023-24

ದಿನಾಂಕ:21.08.2025

**ಕಛೇರಿ ಆದೇಶ**

**ವಿಷಯ:** ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ ಮತ್ತು ನಿವಾರಿಸುವಿಕೆ) ಅಧಿನಿಯಮ-2013 ಅನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಉಲ್ಲೇಖ:** ಮಾನ್ಯ ಸರ್ವೋಚ್ಚ ನ್ಯಾಯಾಲಯವು Miscellaneous Application No.22553/2023 ಪ್ರಕರಣದಲ್ಲಿ ದಿ:12.08.2025 ರಂದು ನೀಡಿರುವ ನಿರ್ದೇಶನಗಳು.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು Miscellaneous Application No.22553/2023 ಪ್ರಕರಣದಲ್ಲಿ ದಿ:12.08.2025 ರಂದು ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಿರುತ್ತದೆ.

1. It is hence responsibility of the Labour Department to ensure that Internal Complaints committee is constituted by every employer of a workplace and if no such Committee has been constituted to take steps under the provisions of the POSH Act. In order to ascertain as to whether the Employer of a workplace as defined under the POSH act has constituteed the Internal complaints in terms of secton 4 of the POSH Act, it is necessary to have the aforesaid data and to take steps wherever there has been no such constitution of the committee. It is for this purpose that the survey was directed vide order dated 03.12.2024.
2. Since a direction is now issued to have the survey conducted with the assistance of the Labour Commissioners in the District and the Chief Labour Commissioner of the State, the said exercise shall be conducted within a period of six weeks from today if not already completed.

ಆದ್ದರಿಂದ, ಎಲ್ಲಾ ಕಾರ್ಮಿಕ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ 10 ಕ್ಕಿಂತ ಹೆಚ್ಚು ಕಾರ್ಮಿಕರನ್ನು ನೇಮಕಾತಿ ಮಾಡಿಕೊಂಡಿರುವ ಎಲ್ಲಾ ವಾಣಿಜ್ಯ ಸಂಸ್ಥೆಗಳು/ ಉದ್ದಿಮೆಗಳು ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ ಮತ್ತು ನಿವಾರಿಸುವಿಕೆ) ಅಧಿನಿಯಮ-2013ರ ಆಂತರಿಕ ದೂರು ಸಮಿತಿಗಳು ರಚನೆಯಾಗಿರುವುದನ್ನು ಖಾತರಿಪಡಿಸಿಕೊಳ್ಳಲು ಈ ಆದೇಶದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಮಾಹಿತಿಯನ್ನು ಪಡೆಯಲು ಕೂಡಲೇ ಕ್ರಮವಹಿಸುವುದು ಮತ್ತು ಜಿಲ್ಲಾಡಳಿತಕ್ಕೆ ಈ ಕುರಿತು ವರದಿಯನ್ನು ಸಲ್ಲಿಸುವುದು

ಎಲ್ಲಾ ಉಪ ಕಾರ್ಮಿಕ ಆಯುಕ್ತರುಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಸದರಿ ಅಧಿನಿಯಮದ ಸೆಕ್ಷನ್-4 ರನ್ವಯ ವಾಣಿಜ್ಯ ಸಂಸ್ಥೆಗಳು/ ಉದ್ದಿಮೆಗಳಲ್ಲಿ ಆಂತರಿಕ ದೂರು ಸಮಿತಿ ರಚನೆಯಾಗಿರುವುದನ್ನು ಖಾತರಿಪರಿಸಿಕೊಳ್ಳುವ ಬಗ್ಗೆ ಮೇಲುಸ್ತುವಾರಿ ವಹಿಸಲು ಈ ಮೂಲಕ ಆದೇಶಿಸಿದೆ.

Gopalk
ಆಯುಕ್ತರು
ಕಾರ್ಮಿಕ ಇಲಾಖೆ

**ಇವರಿಗೆ,**

ಎಲ್ಲಾ ಕಾರ್ಮಿಕ ಅಧಿಕಾರಿಗಳು

**ಪ್ರತಿಯನ್ನು**

1. ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸ ಸೌಧ, ಬೆಂಗಳೂರು

Scanned with OKEN Scanner

2. ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ನಂ. 107, ಕಾವೇರಿ ಭವನ, 1ನೇ ಮಹಡಿ, ಕರ್ನಾಟಕ ಗೃಹ ಮಂಡಳಿ ಕಟ್ಟಡ, ಕೆ.ಜಿ.ರಸ್ತೆ, ಬೆಂಗಳೂರು -09
3. ಅಪರ ಕಾರ್ಮಿಕ ಆಯುಕ್ತರು, ಆಡಳಿತ & ಲೆಕ್ಕಪತ್ರ /ಕೈಗಾರಿಕಾ ಬಾಂಧವ್ಯ ಶಾಖೆ, ಬೆಂಗಳೂರು
4. ಜಂಟಿ ಕಾರ್ಮಿಕ ಆಯುಕ್ತರು, ಕನಿಷ್ಠ ವೇತನ ಶಾಖೆ, ಬೆಂಗಳೂರು
5. ಎಲ್ಲಾ ಉಪ ಕಾರ್ಮಿಕ ಆಯುಕ್ತರುಗಳು- **ಮುಂದಿನ ಸೂಕ್ತ ಕ್ರಮ್ಮಕಾಗಿ**
6. ಪತ್ರಾಂಕಿತ ವ್ಯವಸ್ಥಾಪಕರು, ಆಡಳಿತ ಶಾಖೆ, ಬೆಂಗಳೂರು
7. ಕಾರ್ಮಿಕ ಆಯುಕ್ತರ ಆಪ್ತ ಸಹಾಯಕರು
8. ಕಛೇರಿ ಪ್ರತಿ

Scanned with OKEN Scanner

<u>ನಮೂನೆ</u>

| ಕ್ರ. ಸಂ. | ಜಿಲ್ಲೆಯ ಹೆಸರು | 10 ಕ್ಕಿಂತ ಹೆಚ್ಚು ಕಾರ್ಮಿಕರನ್ನು ನೇಮಕಾತಿ ಮಾಡಿಕೊಂಡಿರುವ ಸಂಸ್ಥೆ/ ಉದ್ದಿಮೆಯ ಹೆಸರು, ವಿಳಾಸ ಮತ್ತು ಇಮೇಲ್ | ಕಾರ್ಮಿಕರ ಸಂಖ್ಯೆ | | ಆಂತರಿಕ ದೂರು ಸಮಿತಿ ರಚನೆಯಾಗಿದೆಯೇ ಅಥವಾ ಇಲ್ಲವೇ | ಆಂತರಿಕ ದೂರು ಸಮಿತಿ ರಚನೆಯಾದ ದಿನಾಂಕ ಮತ್ತು ಸಮಿತಿಯಲ್ಲಿನ ಸದಸ್ಯರ ಸಂಖ್ಯೆ | ಇದೂವರೆಗೂ ದಾಖಲಾದ ದೂರುಗಳ ಸಂಖ್ಯೆ | ಸದರಿ ದೂರಿನ ಬಗ್ಗೆ ಕೈಗೊಂಡ ಕ್ರಮ | ಷರಾ |
|---|---|---|---|---|---|---|---|---|---|
| | | | ಪುರುಷ | ಮಹಿಳೆ | | | | | |
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |

Scanned with OKEN Scanner